ಶ್ರೀ ರಾಮಲಿಂಗಾ ರೆಡ್ಡಿ: ಸಮ್ಮೇಳನದಲ್ಲಿ ಆಸಕ್ತಿಯಿಂದ ಭಾಗವಹಿಸತಕ್ಕಂಥ ಶಾಸಕರಿಗೆ ವಿಶೇಷವಾದ ಕೋಚ್ ವ್ಯವಸ್ಥೆಯನ್ನು ಮಾಡಿ ಕರೆದುಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ: ಅವರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ರೈತರ ಖಾತೆ ಮಾಡುವಲ್ಲಿ ವಿಳಂಬವಾಗುತ್ತಿರುವುದು

26(160) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೋಬಳಿ ಮಟ್ಟದಲ್ಲಿ ಜ್ಯೇಷ್ಠತಾ ಆಧಾರದ ಮೇಲೆ ರೈತರ ಖಾತೆ ಮಾಡುವಾಗ ಯಾರಾದರೂ ತಕರಾರು ಇದ್ದಲ್ಲಿ, ಉಳಿದವರ ಖಾತೆ ಮಾಡಲು ತಡವಾಗುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ಹೌದು.

ಆ) ಇದನ್ನು ಗಮನಿಸಿ, ಹೋಬಳಿವಾರು ಜ್ಯೇಷ್ಠತೆಯನ್ನು ಬದಲಿಸಿ, ಗ್ರಾಮವಾರು ಜ್ಯೇಷ್ಠತೆಯನ್ನು ಅಳವಡಿಸಲಾಗಿದ್ದು, ಈ ಸಮಸ್ಯೆ ಕಡಿಮೆಯಾಗುವಂತೆ ಕ್ರಮಕೈಗೊಳ್ಳಲಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹೋಬಳಿವಾರು ಖಾತೆ ಬದಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ನಾನಾ ವಿಧದ ಖಾತೆಗಳು ಬರುತ್ತವೆ. ಅದರಲ್ಲಿ ಐ.ಎಂ.ಆರ್.ಪ್ರಕಾರ ಬದಲಾವಣೆ ಮಾಡತಕ್ಕಂಥ ಖಾತೆಗಳು ಏನಿವೆ ಅದಕ್ಕೆ ಸರ್ಕಾರವೆ 83 ದಿವಸ ಟೈಮ್ ಕೊಟ್ಟಿರುತ್ತೀರಿ. ಸುಮಾರು 6 ತಿಂಗಳವರೆಗೆ ರೈತರಿಗೆ ಖಾತೆ ಬದಲಾವಣೆ ಅವನ ಕೈಗೆ ಸಿಗುತ್ತಿಲ್ಲ. ಎರಡನೆಯದಾಗಿ 125 ಯೋಜನೆ ಎಂದು ತಂದಿರುತ್ತೀರಿ. ಇಡಿ ಗ್ರಾಮದ ದುರಸ್ಥಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಆ ಗ್ರಾಮದ ಎಲ್ಲರ ಜಮೀನಿನ ದುರಸ್ತಿಯನ್ನು ಮಾಡತಕ್ಕಂಥ,

ಸರ್ಕಾರದಿಂದ ಮಂಜೂರಾದ ಜಮೀನಿನ ದುರಸ್ತಿ ಮಾಡತಕ್ಕಂಥ ಕಾರ್ಯದಲ್ಲಿ ಬಹಳ ವಿಳಂಬವಾಗುತ್ತಿದೆ. ಖಾತೆ ಬದಲಾವಣೆ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುತ್ತೀರಿ. ದಯಮಾಡಿ ಜಿಲ್ಲಾಧಿಕಾರಿಗಳಿಂದ ತಹಶೀಲ್ದಾರ್ ಅವರ ಲೆವಲ್‌ಗೆ ಸಾಕು ಎಂದು ನನಗೆ ಅನ್ನಿಸುತ್ತದೆ. ಜಿಲ್ಲಾಧಿಕಾರಿಗಳನ್ನು ಒಬ್ಬ ಸಾಮಾನ್ಯ ರೈತ ಹೋಗಿ ಆ ಜಿಲ್ಲಾಧಿಕಾರಿಯವರ ಮಟ್ಟದಲ್ಲಿ ಕೆಲಸವನ್ನು ಮಾಡಿಸಲಿಕ್ಕೆ ಸಾಧ್ಯತೆ ಇಲ್ಲದಿರುವುದರಿಂದ ಅದನ್ನು ತಹಶೀಲ್ದಾರ್ ಲೆವಲ್‌ಗೆ ದಯಮಾಡಿ ಮಾನ್ಯ ಕಂದಾಯ ಸಚಿವರು ಇಳಿಸಿ ಕೊಟ್ಟರೆ ನಿಜವಾಗಲೂ ಆ ಬಡ ರೈತರಿಗೆ ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ತಮಗೆ ಹೇಳಬೇಕಾಗುತ್ತದೆ. ಅದು ಆದ ಮೇಲೆ ಮಾನ್ಯ ನಾಡಗೌಡರ ಪ್ರಶ್ನೆ ಬಂದಾಗಲೂ ಈ ಪ್ರಶ್ನೆ ಬಂತು. 50-100 ವರ್ಷಗಳಿಂದ ಜಮೀನನ್ನು ಅವರು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಕ್ರಯಪತ್ರಗಳು ಮನೆಯಲ್ಲಿವೆ, ಅವರ ತಾತ, ತಂದೆ ಎಲ್ಲರೂ ತೀರಿ ಹೋಗಿದ್ದಾರೆ. ಆದರೆ ಆ ಕ್ರಯಪತ್ರದ ಆಧಾರದ ಮೇಲೆ ಇವತ್ತಿನ ದಿವಸ ಖಾತೆಯನ್ನು ಬದಲಾವಣೆ ಮಾಡತಕ್ಕಂಥದ್ದಕ್ಕೆ, ಅವರಿಗೆ ಸರ್ಕಾರದಿಂದ ಯಾವುದೆ ಸಹಾಯ ಸವಲತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಗೆ ಒಳಪಡುವಂಥದ್ದಕ್ಕೆ ಒಂದು ವಿಚಾರವಾಗಿದ್ದರಿಂದ ಅದನ್ನು ದಯಮಾಡಿ ಆ ಕ್ರಯಪತ್ರ ಇದ್ದಾಗ ಬಹಳ ಅತಿ ಜರೂರಾಗಿ ಈ ಖಾತೆ ಬದಲಾವಣೆ ಮಾಡಿಸದೆ ಹೋದರೆ ಬಹುಶ: ನಿಮಗೂ ಜನಸಾಮಾನ್ಯರಿಂದ ಕೆಟ್ಟ ನಿಂದನೆ ಬರುತ್ತದೆ. ಶಾಸಕರಾದ ನಮಗೂ ಖಾತೆ ಮಾಡಿಸಿ ಕೊಡುವುದಕ್ಕಾಗಲಿಲ್ಲ ಎನ್ನುವ ಭಾವನೆ ಜನಸಾಮಾನ್ಯರು ವ್ಯಕ್ತ ಮಾಡುತ್ತಿದ್ದಾರೆ.

ಅದು ಅಲ್ಲದೆಯೆ ಇನ್ನೊಂದು ಸಲಹೆ ಇದೆ, ಅದು ಸಲಹೆಯಲ್ಲ, ತಾವು ಸಲಹೆ ಎಂದಾದರೂ ತಿಳಿದುಕೊಳ್ಳಿ. ಅದನ್ನು ಮಾಡಿದರೆ ನಿಜವಾಗಿಯೂ ಗ್ರಾಮೀಣ ರೈತರಿಗೆ ಒಳ್ಳೆಯದಾಗುತ್ತದೆ. ತಿದ್ದುಪಡಿ ಮಾಡುವುದನ್ನು ತಾವು ಎ.ಸಿ.ರವರ ಲೆವೆಲ್‌ಗೆ ಇಟ್ಟಿದ್ದೀರಿ. ಯಾವುದಾದರೂ ಒಂದು ಜಮೀನಿನ ಆಕಾರ್‌ಬಂದ್ ದುರಸ್ತಿ ಮಾಡುವಂತಹದ್ದು ತಪ್ಪಾದಂತಹ ಸಂದರ್ಭದಲ್ಲಿ ತಿದ್ದುಪಡಿ ಮಾಡುವಂತಹ ವ್ಯವಸ್ಥೆಯನ್ನು Assistant Commissioner Levelಗೆ ಇಟ್ಟಿದ್ದೀರಿ. ದಯಮಾಡಿ Assistant Commissioner Levelಗೆ ಅದು ಬೇಕಿಲ್ಲ. ನನ್ನ ಒಂದು ಅಂದಾಜಿನ ಪ್ರಕಾರ Revenue Inspectorಗೆ ಇದ್ದರೆ ಸಾಕು,

ಬಹಳ ಸುಲಭವಾಗಿ ಕೆಲಸಗಳು ಆಗುತ್ತದೆ. ಇವೆಲ್ಲವನ್ನು ಸಡಿಲಗೊಳಿಸಿ ನಿಜವಾಗಿಯೂ ನೀವು ಏನಾದರೂ ಒಂದು ಮಾರ್ಪಾಡನ್ನು ತಂದರೆ ಸಾಮಾನ್ಯ ರೈತರ ಬದುಕಿಗೆ ಒಳ್ಳೆಯದಾಗುತ್ತದೆ, ಸರ್ಕಾರಿ ಸವಲತ್ತುಗಳನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ತಾವು ಉತ್ತರವನ್ನು ಕೊಟ್ಟಿದ್ದೀರಿ. ಹೋಬಳಿ ಲೆವೆಲ್‌ನಲ್ಲಿ ಆಗುವಂತಹದ್ದು, ಹೋಬಳಿ ಲೆವೆಲ್‌ನಿಂದ circle ಲೆವೆಲ್ ವಿಲೇಜ್ ಅಕೌಂಟೆಂಟ್‌ಗೆ ತಂದಿದ್ದೀರಿ. ಇದು ಬಹಳ ಸಂತೋಷ. ಅದೇ ರೀತಿಯಾಗಿ M.I.R. ಪ್ರಕಾರ ಏನು ಹೋಬಳಿ ಲೆವೆಲ್‌ನಲ್ಲಿದೆ ಅದನ್ನೂ ಸಹ circle levelಗೆ ತಂದು ಸರಳೀಕರಣಗೊಳಿಸಬೇಕು. ಜನರು ಖಾತೆ ಬದಲಾವಣೆಗೋಸ್ಕರವಾಗಿ ಸರ್ಕಾರಿ ಕಛೇರಿಗಳಿಗೆ ಒಂದೂವರೆ ಹಾಗೂ ಎರಡೂ ವರ್ಷಗಳ ಕಾಲ ಸುತ್ತಿಸುತ್ತಿ ಅಲೆಯುತ್ತಿದ್ದಾರೆ. ಏಕೆಂದರೆ ಇವತ್ತಿನ ದಿವಸ ಸರ್ಕಾರಿ ಸವಲತ್ತುಗಳನ್ನು ತೆಗೆದುಕೊಳ್ಳಬೇಕಾದರೆ ಖಾತೆಯನ್ನು ಬಹಳ important document ಆಗಿ ಮಾಡಿದ್ದೀರಿ. ಬಜೆಟ್‌ನಲ್ಲಿ ಸವಲತ್ತುಗಳನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಅವನು ಸರ್ಕಾರಿ ಸವಲತ್ತುಗಳನ್ನು ತೆಗೆದುಕೊಳ್ಳಬೇಕೆಂದರೆ, ಆತನು ಯಾವ ಸಾಲವನ್ನು ತೆಗೆದುಕೊಳ್ಳಬೇಕೆಂದರೆ, ಅವನಿಗೆ ಜಮೀನಿನ ಖಾತೆಯೇ ಇರುವುದಿಲ್ಲ. ಅವನು ಬೋರ್‌ವೆಲ್‌ನ್ನು ಕೊರೆಸಿಕೊಳ್ಳಬೇಕೆಂದರು ಸಹ ಆತನ ಹೆಸರಿನಲ್ಲಿ ಖಾತೆಯೇ ಇರುವುದಿಲ್ಲ. ಇದು ಜನಸಾಮಾನ್ಯರ ಬವಣೆಯಾಗಿದೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಹೇಳಲಿ. ನಂತರ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಈ ಬಗ್ಗೆ ಮಾನ್ಯ ಸಚಿವರು ಗಂಭೀರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಹೇಳಲಿ, ನಂತರ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಜನರಿಗೆ ಅನುಕೂಲ ಮಾಡಿಕೊಡ ಬೇಕೆಂಬುದರ ಬಗ್ಗೆ ನಮ್ಮ ಒತ್ತಾಯವಿದೆ.

ಅಧ್ಯಕ್ಷರು: ಆಯಿತು.

ಶ್ರೀ ವೈ.ಎನ್. ರುದ್ರೇಶ್‌ಗೌಡ: ಮಾನ್ಯ ಮಂತ್ರಿಗಳೆ, ಖಾತೆ ಬದಲಾವಣೆ ಮಾಡುವುದಕ್ಕೆ 82 ದಿವಸವನ್ನು ಇಟ್ಟಿರುವುದರ ಬಗ್ಗೆ ಸ್ವಲ್ಪ ಕಡಿಮೆ ಮಾಡಬೇಕು. ಇದಕ್ಕಾಗಿ ಅಷ್ಟು ದಿವಸಗಳ ಅವಶ್ಯಕತೆ ಇರುವುದಿಲ್ಲ. ಅದನ್ನು ಕನಿಷ್ಠ ಒಂದು ತಿಂಗಳು ಮಾಡಿದರೆ ಸಾಕು. ಏಕೆಂದರೆ ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿರುವಂತಹ ordinary ರೈತರು ಖಾತೆ ಬದಲಾವಣೆಗೋಸ್ಕರ 82 ದಿವಸಗಳು ಕಾಯುತ್ತಾ ಕೂರುವುದು ಒಳ್ಳೆಯದಲ್ಲ ಎನ್ನುವಂತಹದ್ದು ನನ್ನ ಭಾವನೆಯಾಗಿದೆ.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಭೂಮಿ ಕಾರ್ಯ ವಿಧಾನದಲ್ಲಿ ಯಾವುದೇ ಒಂದು ತಕರಾರು ಅರ್ಜಿಗಳು ಇದ್ದರೆ ಅದರಿಂದ ಖಾತೆಗಳು ಬದಲಾವಣೆ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲದಂತೆ ಬೇರೆ ಒಂದು ಪ್ರಕರಣದ ಪಟ್ಟಿಗೆ ಸೇರಿಸುತ್ತಿದ್ದೇವೆ. ಆದು ಆದ ಮೇಲೆ ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ಹೋಬಳಿ ಮಟ್ಟದಿಂದ ಇವತ್ತು ಗ್ರಾಮವಾರು ಮಟ್ಟಕ್ಕೆ ತೆಗೆದುಕೊಂಡು ಬಂದಿದ್ದೇವೆ. ಅದು ಯಾವುದೇ ತೊಂದರೆ ಆಗದ ಹಾಗೆ village-wise separate ಆಗಿ ಮಾಡಿ ವಿಲೇವಾರಿ ಮಾಡುವುದಕ್ಕೆ ಕ್ರಮವನ್ನು ಜರುಗಿಸುತ್ತಿದ್ದೇವೆ. ಮಾನ್ಯ ಸದಸ್ಯರಾದ ಶಿವಲಿಂಗೇಗೌಡರು 125 ಯೋಜನೆ ಜಿಲ್ಲಾಧಿಕಾರಿಗಳ ಮಟ್ಟಕ್ಕೆ ಇದೆ ಎಂದು ಹೇಳಿದ್ದಾರೆ. ಅದು ತಹಸೀಲ್ದಾರ್ ಮಟ್ಟಕ್ಕೆ ಇದೆ, ಅದು ಜಿಲ್ಲಾಧಿಕಾರಿಗಳ ಮಟ್ಟಕ್ಕಿಲ್ಲ. ಖಾತೆ ಬದಲಾವಣೆಗೆ ಸಂಬಂಧಪಟ್ಟಂತೆ ಸಮಯವನ್ನು ಕಡಿಮೆ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಅದಕ್ಕೆ ತಕ್ಕಂತೆ ಕ್ರಮವನ್ನು ಜರುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ತಿದ್ದುಪಡಿಯ ವಿಷಯ ಬಹಳ important ಈ ತಿದ್ದುಪಡಿ ಮಾಡುವ ಬಗ್ಗೆ ಒಂದೂವರೆ ವರ್ಷ ಹಿಡಿಯುತ್ತೆ. ಎಲ್ಲವನ್ನು ಸ್ವಲ್ಪ ಸರಿ ಮಾಡಿದರೆ ಒಳ್ಳೆಯದು.

ಶ್ರೀ ಜಿ. ಕರುಣಾಕರ ರೆಡ್ಡಿ: ಅದನ್ನು ಸರಿ ಮಾಡುತ್ತೇನೆ. ಈ ಬಗ್ಗೆ State Level meeting ಮಾಡಿ, ಬಹಳಷ್ಟು ಸದಸ್ಯರು ಹಾಗೂ ತಾವು ಹೇಳಿದ ಹಾಗೆ ಸರ್ವೆ ಆಗಿರಬಹುದು, ಇಡೀ ರಾಜ್ಯದಲ್ಲಿ ಈ ಬಗ್ಗೆ ಸಮಸ್ಯೆ ಇದೆ. ಈ ಬಗ್ಗೆ ರಾಜ್ಯ ಮಟ್ಟದಲ್ಲಿ ಜಿಲ್ಲಾಧಿಕಾರಿಗಳನ್ನು ಹಾಗೂ ಡಿ.ಡಿ.ಎಲ್.ಆರ್. ರವರನ್ನು ಕರೆಸಿ ಒಂದು ಸಭೆಯನ್ನು ಮಾಡಿ ಎಲ್ಲಿ ಜಾಸ್ತಿ ಸಮಸ್ಯೆ ಇದೆ ಅಲ್ಲಿಗೆ ನಾನು ಹೋಗಿ ಅದನ್ನು ಸರಿ ಮಾಡುತ್ತೇನೆ. ತಹಶೀಲ್ದಾರ್ ರವರ ಕೈಗೆ ಕೊಟ್ಟಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ತಹಶೀಲ್ದಾರ್ ರವರು ಕೆಲಸ ಇಲ್ಲದೆಯೇ ಕುಳಿತಿದ್ದಾರೆ. ಅವರಿಗೆ ದಯವಿಟ್ಟು ಕೊಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಸುಮ್ಮನೆ ಡಿಲೇ ಆಗುತ್ತಿದೆ. ರೈತರು 2–3 ತಿಂಗಳುಗಳ ಕಾಲ ಕಛೇರಿಗಳಿಗೆ ಅಲೆಯುತ್ತಿದ್ದಾರೆ.

ಅಧ್ಯಕ್ಷರು: ಆಯಿತು. ಪ್ರಶ್ನೆ ಸಂಖ್ಯೆ 27(333) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡರವರ ಪ್ರಶ್ನೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ. ಶ್ರೀ ಎ.ಎಸ್. ಪಾಟೀಲ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ನಾರಾಯಣಪುರ ಅಣೆಕಟ್ಟು ಅಚ್ಚುಕಟ್ಟು ಪ್ರದೇಶಗಳ ಕಾಲುವೆ ದುರಸ್ತಿ

28(153) ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟು ಅಚ್ಚುಕಟ್ಟು ಪ್ರದೇಶದ ಕಾಲುವೆ ದುರಸ್ತಿ ಮತ್ತು ನಿರ್ವಹಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಸದರಿ ಕಾಲುವೆಗಳ ದುರಸ್ತಿ ಮತ್ತು ನಿರ್ವಹಣೆಗೆ ಕಳೆದ 2008–09, 2009–10, 2010–11ರ ಸಾಲಿಗೆ ನೀಡಿರುವ ಹಣವೆಷ್ಟು ಮತ್ತು ಸದರಿ ಹಣ ಬಳಸಿಕೊಳ್ಳಲು ನೀಡಿರುವ ಮಾನದಂಡಗಳೇನು;

ಇ) ಸದರಿ ಕಾಲುವೆಗಳಿಗೆ ನೀಡಿರುವ ಹಣದಲ್ಲಿ ಯಾವ ಯಾವ ಕಾಲುವೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ಕಾಲುವೆ ಹೆಸರುಗಳನ್ನೊಳಗೊಂಡ ಪೂರ್ಣ ವಿವರ ನೀಡುವುದು);

ಈ) ಸದರಿ ಕಾಲುವೆಗಳ ದುರಸ್ತಿ ಮತ್ತು ನಿರ್ವಹಣೆಗೆ ನೀಡುತ್ತಿರುವ ಅನುದಾನ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಕೈಗೊಂಡ ಕ್ರಮವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಪ್ರತಿ ವರ್ಷ ಕ್ಲೋಜರ್ ಅವಧಿಯಲ್ಲಿ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ಮಾಡಲಾಗುತ್ತಿದೆ.

ಆ) ಕಳೆದ 2008–09, 2009–10, 2010–11ರ ಸಾಲಿಗೆ ನೀಡಿರುವ ಹಣದ ವಿವರ ಈ ಕೆಳಗಿನಂತಿದೆ.